ಮೆಟ್ಟಿಲ ಮೇಲೆ ನಿಂತವಳನ್ನು ಹಳೆ ಪರಿಚಯದವಳೆಂಬ, ಸಲಿಗೆಯಿಂದ ಒಡನಾಡಿದವಳೆಂಬ, ಒಂದು ಕಾಲದಲ್ಲಿ ನನ್ನ ತೌರೂರಿನಲ್ಲಿ ಸೊಂಟ ಮುರೀ ಗೆಯ್ದವಳೆಂಬ ಸೌಜನ್ಯಕ್ಕಾದರೂ ಒಳಗೆ ಕರೆಯದೆ, ಕೈಗೆ ಹತ್ತು ರೂಪಾಯಿಯ ಒಂದು ನೋಟು ಹಿಡಿಸಿ ಸಾಗಹಾಕಿದ್ದೆ. ಹಾಗೆ ಸಾಗ ಹಾಕುವಾಗ 'ಪದೇಪದೇ ಇವಳು ಇದೇ ಉದ್ಯೋಗ ಮಾಡ್ಕೊಂಡ್ರೆ ಕಷ್ಟ' ಅನ್ನಿಸಿದ್ದು ದೇವರಾಣೆಗೂ ಹೌದು. 'ಹಾಗೇನಾದ್ರೂ ಆದರೆ ನಿಷ್ಠುರ ಆಗಲೇಬೇಕು' ಎಂದು ತೀರ್ಮಾನಿಸಿದ್ದೂ ಹೌದು. ನನ್ನ ವರ್ತನೆಯಿಂದ ಮುಖಭಂಗವಾದಂತಾಯ್ತಾ ಪುಣ್ಯಮ್ಮನಿಗೆ? ಮರ್ಯಾದೆಗೆ ಮುಕ್ಕಾಯ್ತಾ? ಅಥವಾ ಸ್ವಾಭಿಮಾನಕ್ಕೆ? ನನ್ನ ಆತಂಕಕ್ಕೆ ಅರ್ಥವಿಲ್ಲವೆನ್ನುವಂತೆ ಮತ್ತ್ಯಾವತ್ತೂ ಪುಣ್ಯಮ್ಮ ನಮ್ಮ ಮನೆಯ ಕಡೆ ತಲೆ ಹಾಕಲಿಲ್ಲ. ಆದರೆ ಕೊರೆಯತೊಡಗಿದ್ದು ನನ್ನ ಅಂತರಾತ್ಮ. ನಾನು ನಡೆದುಕೊಂಡ ರೀತಿ ಸರಿಯಾದದ್ದಾ? ಮಾನವೀಯತೆ ಅನ್ನುವುದನ್ನು ಮರೆತುಬಿಟ್ಟೆನಾ? ಅನಿರೀಕ್ಷಿತವಾಗಿ ಹಳೆ ಪರಿಚಯದ ಮುಖವೊಂದು ಕಂಡ ಹಿಗ್ಗಿನಲ್ಲಿ 'ಕಿವಿಯಿಂದ ಕಿವಿಯವರೆಗೆ' ಎನ್ನುವಂತೆ ಬಾಯಗಲಿಸಿ ನಕ್ಕವಳ ಸೌಹಾರ್ದ ವರ್ತನೆಗೆ ನಾನು ಪ್ರತಿಕ್ರಯಿಸಿದ ರೀತಿ ತಕ್ಕುದಾಗಿತ್ತಾ? ಮನದ ಮಾತನ್ನು ಮೀರಿ ತದ್ವಿರುದ್ಧವಾಗಿ ನಡೆದುಕೊಳ್ಳಬೇಕಾದ ಸಂದರ್ಭಗಳು ಬದುಕಿನಲ್ಲಿ ಕೆಲವೊಮ್ಮೆ ಅನಿವಾರ್ಯವಾಗಿಬಿಡುತ್ತವೆಯೇ? ನನ್ನ ಮಟ್ಟಿಗೆ ನನ್ನ ವರ್ತನೆಯನ್ನು ಒಪ್ಪಿಟ್ಟುಕೊಳ್ಳಲು ಸಕಾರಣಗಳಿದ್ದುವು. ಹಾಗೂ ಯೋಚಿಸುತ್ತಾ ಹೋದಂತೆ ಈ ಪಟ್ಟಿಗೆ ಇನ್ನೂ ಕೆಲವು ಸೇರ್ಪಡೆಯಾಗುತ್ತಿದ್ದುವು. ಪರಿಚಯಸ್ಥಳು ಅಂದ ಮಾತ್ರಕ್ಕೆ ಪೇಟೆಮನೆಯ ನಿರ್ದಿಷ್ಟ ವರಮಾನದಲ್ಲಿ ಬದುಕುತ್ತಿರುವ ಕುಟುಂಬವೊಂದು ಅವಳ ಕಷ್ಟಸುಖಗಳಿಗೆ ಸ್ಪಂದಿಸಲು ಸಾಧ್ಯವೇ? ಕೊಂಚ ವಿಶ್ವಾಸ ತೋರಿಸಿದರೂ ಅದರ ದುರುಪಯೋಗವಾಗುವುದಿಲ್ಲವೆಂಬುದಕ್ಕೆ ಏನಿದೆ ಗ್ಯಾರಂಟಿ? ಹಳ್ಳಿಮನೆಗಳ ಕತೆ ಬೇರೆ. ಪೇಟೆಮನೆಗಳ ಸಂದಿಗ್ಧ ಪರಿಸ್ಥಿತಿ ಬೇರೆ. ಹೊತ್ತಲ್ಲದ ಹೊತ್ತಿನಲ್ಲಿ ಬಂದು ಕೂತರೆ ನಿಭಾಯಿಸುವುದು ಹೇಗೆ? ಪುಣ್ಯಮ್ಮನೊಡನೆ ನಾನು ನಡೆದುಕೊಂಡ ರೀತಿ ಸರಿಯೇ ಸರಿ ಎಂದು ನನ್ನನ್ನು ನಾನು ನಂಬಿಸಿಕೊಳ್ಳಲೆತ್ನಿಸಿದರೂ ಮನದಾಳದಲ್ಲಿ ಸಣ್ಣಗೆ ಹೊರಳಾಡತೊಡಗಿದ ಪಾಪಪ್ರಜ್ಞೆ. ಕೊನೆಯ ಪಕ್ಷ ವಿಶ್ವಾಸದ ಒಂದು ಮುಗುಳ್ನಗೆ, ಆತ್ಮೀಯತೆಯ ಎರಡು ಮಾತುಗಳೂ ತುಟ್ಟಿಯಾದದ್ದು ಯಾಕೆ? ಮತ್ತದೇ ಸಮರ್ಥನೆ. ಸದರ ಕೊಟ್ಟರೆ ತಲೆಯೇರಿ ಕೂರಬಹುದಾದ ಸಂಭವದ ಕುರಿತು ಭೀತಿ, ಮುನ್ನೆಚ್ಚರಿಕೆ...

★★★

ಬಾಯ್ಬಿಟ್ಟು ಕೇಳಿದ್ದರೆ ಸಿಕ್ಕಿಯೇ ಸಿಗುತ್ತಿತ್ತು ಉತ್ತರ. ಬಾಯ್ಬಿಟ್ಟಿದ್ದರೆ ತಾನೇ? ಪುಣ್ಯಮ್ಮನಿಗೆ ತಿರಿದುಕೊಂಡು ತಿನ್ನುವಂತಾ ದುಃಸ್ಥಿತಿ ಯಾಕೆ ಬಂತು? ಅವಳ ಪ್ರಾಣಪದಕದಂತಿದ್ದ ಮಗ ಏನಾದ? ಓದಿ ಏನಾದರೊಂದು ಉದ್ಯೋಗ ಹುಡುಕಿಕೊಂಡು ಗೃಹಸ್ಥನಾಗಿರಬಹುದಾದವನು ತನ್ನ ಜೀವರಸವನ್ನೇ ಬಸಿದು ಸಾಕಿದವಳನ್ನು ಬೀದಿಗೆ ಬಿಟ್ಟಿದ್ಯಾಕೆ? ತನ್ನ ತಲೆಗೆ ಎಣ್ಣೆ ಕಾಣಿಸದೆ ಮಗನ ನೆತ್ತಿ ತಂಪು ಮಾಡಿದವಳು ಪುಣ್ಯಮ್ಮ. ತಾನು ತಿನ್ನಬೇಕಾದ ಅಪರೂಪದ ತಿಂಡಿಗಳನ್ನು ಮಗನಿಗೆ ಮೀಸಲಿರಿಸಿದವಳು ಪುಣ್ಯಮ್ಮ. ಇನ್ನೂ ನೆನಪಿದೆ, ಆಗೀಗ ಮೂಗಲ್ಲಿದ್ದುದನ್ನು ಕೆರೆದು ಬಾಯಲ್ಲಿಟ್ಟುಕೊಳ್ಳುತ್ತಿದ್ದ ರಣಕೊಳಕನ ಬಗ್ಗೆ, "ನೋಡೇ ಪುಣ್ಯಮ್ಮ..." ಎಂದು ಅವಳ ಹತ್ತಿರ ಚಾಡಿ ಬೆಸೆದರೆ ಪುಣ್ಯಮ್ಮ ಅವನ ಕೈಗೆ ಪಟ್ಟನೆ ಒಂದೇಟು ಕೊಟ್ಟಂತೆ ಮಾಡಿ ನಮ್ಮ ಮಾತಿಗೆ ಬೆಲೆ ಕೊಟ್ಟಿದ್ದೇನೆಂದು ಹೇಗೆ ತೋರಿಸಿಕೊಳ್ಳುತ್ತಿದ್ದಳು ಅಂದರೆ ಅವಳು ಹೊಡೆದರೆ ಅವನ ಕೈ